


ಡಿಲ್ನ ಕೆ. ಮತ್ತು ರೂಪ ಅಳಗಿರಿ ಸ್ವಾಮಿ ಇಬ್ಬರೂ ಸಾಗರಯಾನ ಮಾಡಲು ಹೊರಟ ಐಎನ್‌ಎಸ್‌ವಿ 'ತಾರಿಣಿ'ಗೆ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ ನೀಡಿದ ಸಂದರ್ಭ

(2010) ಮತ್ತು 'ಸಾಗರ ಪರಿಕ್ರಮ–2' (2013) ಯಾತ್ರೆಗಳಲ್ಲಿ ವಿಶ್ವ ಪರ್ಯಟನೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದರು. ಮೂರನೆಯ ಸಾಗರ ಪರಿಕ್ರಮ 2017ರಲ್ಲಿ ನಡೆದಿತ್ತು. ಅದರಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿದ್ದ ಮಹಿಳಾ ಅಧಿಕಾರಿ ವರ್ತಿಕಾ ಜೋಶಿ ಅವರು ಐದು ಜನರ ತಂಡವನ್ನು ಕಟ್ಟಿಕೊಂಡು ವಿಶ್ವಪರ್ಯಟನೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದರು.

## ಏಕಾಂಗಿ ಸಾಹಸಕ್ಕೆ ತಯಾರಿ

ಭಾರತದ ಸಾಗರ ವಿಶ್ವಪರ್ಯಟನೆಗಳ ಪಿತಾಮಹ ಎಂದೇ ಕರೆಸಿಕೊಳ್ಳುವ ನೌಕಾಸೇನೆಯಲ್ಲಿ ವೈಸ್ ಅಡ್ಮಿರಲ್ ಆಗಿದ್ದ ಎಂ.ಪಿ. ಆವತಿ ಅವರು ಭಾರತೀಯ ಮಹಿಳೆಯೊಬ್ಬರು ಏಕಾಂಗಿಯಾಗಿ ವಿಶ್ವ ಪರ್ಯಟನೆ ಮಾಡಬೇಕು ಎನ್ನುವುದು ಬಹುದಿನದ ಕನಸು ಎಂದಿದ್ದಾರೆ. 'ಸಾಗರ ಪರಿಕ್ರಮ–4' ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭವಾಗಲಿದೆ. ಕೇರಳದ ಕೋಜಿಕೋಡ್‌ನ ಡಿಲ್ನ 2014ರಲ್ಲಿ ಭಾರತೀಯ ನೌಕಾಪಡೆಯಲ್ಲಿ ಲಾಜಿಸ್ಟಿಕ್ಸ್ ಅಧಿಕಾರಿಯಾಗಿ ನೇಮಕಗೊಂಡರು. ಅದಕ್ಕೂ ಮುಂಚೆ ಕೇರಳ ರಾಜ್ಯ ಕ್ರಿಕೆಟ್ ತಂಡದಲ್ಲಿ ಆಲ್‌ರೌಂಡರ್ ಆಗಿ ಆಡುತ್ತಿದ್ದರು. ರೈಫಲ್ ಶೂಟಿಂಗ್‌ನಲ್ಲಿ ರಾಷ್ಟ್ರೀಯ ಸಾಧನೆ ಮಾಡಿರುವ ಡಿಲ್ನ ಕಳೆದ ವರ್ಷ 'ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ' (YAI) ನಡೆಸಿದ ಸಾಗರ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ವಿಜೇತರಾಗಿ, ಅಡ್ಮಿರಲ್ ರಾಮದಾಸ್ ಟ್ರೋಫಿ ಗಳಿಸಿದ್ದರು.

ಪುದುಚೇರಿಯ ರೂಪ ಅಳಗಿರಿ ಸ್ವಾಮಿ ಏರೊನಾಟಿಕಲ್ ಎಂಜಿನಿಯರಿಂಗ್ ಪದವೀಧರೆ. 2017ರಲ್ಲಿ ಭಾರತೀಯ ನೌಕಾದಳದಲ್ಲಿ ಶಸ್ತ್ರಾಸ್ತ್ರ ಪರೀಕ್ಷಕ ಅಧಿಕಾರಿಯಾಗಿ ಕೆಲಸಕ್ಕೆ ಸೇರಿಕೊಂಡ ಅವರು, ಈಗಲೂ ಅದೇ ವಿಭಾಗದಲ್ಲಿ ಮುಂದುವರೆದಿದ್ದಾರೆ. ಬೆಂಗಳೂರಿನ ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿಯಲ್ಲಿ ಕೆಲ ಕಾಲ ಕೆಲಸ ನಿರ್ವಹಿಸಿದ್ದ ರೂಪ ಅವರೂ, ಕಳೆದ ವರ್ಷ YAI ನಡೆಸಿದ ಸ್ಪರ್ಧೆಗಳಲ್ಲಿ ವಿಜೇತರಾಗಿ ಅಡ್ಮಿರಲ್ ರಾಮದಾಸ್ ಟ್ರೋಫಿ ತಮ್ಮದಾಗಿಸಿಕೊಂಡಿದ್ದಾರೆ.



## ಲಾಸ್ಟ್ ಪಂಚ್

ವೇಗದ ಜೆಟ್ ವಿಮಾನದಲ್ಲಿ ಪ್ರಪಂಚವನ್ನು 48 ಗಂಟೆಗಳಲ್ಲಿ ಸುತ್ತಬಹುದು. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವು ಪ್ರತಿ 90 ನಿಮಿಷಕ್ಕೆ ಇಡೀ ವಿಶ್ವವನ್ನು ಒಂದು ಬಾರಿ ಸುತ್ತಿಬರುತ್ತದೆ. ಗಂಟೆಗೆ ನಾಲ್ಕು ಕಿಲೋ ಮೀಟರ್ ವೇಗದಲ್ಲಿ ನಡೆದರೆ ಒಂದು ವರ್ಷದೊಳಗೆ ಜಗತ್ತನ್ನು ಸುತ್ತಿ ಬರಬಹುದು. ಎಲ್ಲೂ ನಿಲ್ಲದೆ ಹೋದರೆ ದೋಣಿಯನ್ನು ಬಳಸಿ ಇನ್ನೂರು ದಿನಗಳಲ್ಲಿ ಪ್ರಪಂಚವನ್ನು ಸಾಗರ ಮಾರ್ಗವಾಗಿ ಸುತ್ತಿ ಬರಬಹುದು. ಈಗಾಗಲೇ 200 ಜನ ಏಕಾಂಗಿಯಾಗಿ ಸಾಗರ ಮಾರ್ಗವಾಗಿ ವಿಶ್ವ ಪರ್ಯಟನೆ ಮಾಡಿದ್ದಾರೆ.

ಸಾಮಾನ್ಯವಾಗಿ ದೊಡ್ಡ ಸಾಧನೆ ಎನ್ನುವುದು ಕೇವಲ ಅಂತರಿಕ್ಷ ವಿಜ್ಞಾನಕ್ಕೆ ಸಂಬಂಧಪಟ್ಟ ಕೆಲಸಗಳಷ್ಟೇ ಎನ್ನುವಷ್ಟರಮಟ್ಟಿಗೆ ಅಭಿಪ್ರಾಯವೊಂದು ರೂಪುಗೊಂಡಿದೆ. ಈ ಅಭಿಪ್ರಾಯ ರೂಪುಗೊಳ್ಳುವಲ್ಲಿ ಮಾಧ್ಯಮಗಳ ಪಾತ್ರ ಬಹಳ ದೊಡ್ಡದಿದೆ. ಇದು ಬದಲಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in